C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 88/2025

**ಚಾ.ಸಾ.–02 ಪ್ರಾ.ಸಾ.–02**

| | |
|---|---|
| **ಸಾಕ್ಷಿದಾರರ ಹೆಸರು** | **ನಂದಕುಮಾರ್** |
| **ತಂದೆಯ ಹೆಸರು** | **ವೆಂಕಟರಾಜು** |
| **ವಯಸ್ಸು** | **30 ವರ್ಷಗಳು** |
| **ಉದ್ಯೋಗ** | **ಎಳೆನೀರು ವ್ಯಾಪಾರ** |
| **ವಾಸ** | **ಗೊರವನಹಳ್ಳಿ ಗ್ರಾಮ** |

**ದಿನಾಂಕಃ 04.04.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ- 1 ಮತ್ತು 3 ರವರ ಪರಿಚಯ ನನಗೆ ಇದೆ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. ಚಾಸಾ- 4, 5, 6, 7, 8, 9, 10, 11, 12, 13, 14 ರವರ ಪರಿಚಯ ನನಗೆ ಇದೆ. ಅವರು ನಮ್ಮ ಊರಿನವರು.

2. ಈ ದಿನ ನ್ಯಾಯಾಲಯದ ಮುಂದಿರುವ 1 ರಿಂದ 4ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1 to 4 in the dock). ಅವರು ನಮ್ಮ ಊರಿನವರು. ಅವರು ಒಕ್ಕಲಿಗ ಜಾತಿಗೆ ಸೇರಿದವರು.

3. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಚಾಸಾ- 1 ರವರಿಗೂ, ನನಗೂ ಆರೋಪಿತರ ಮದ್ಯೆ ಯಾವುದೇ ಗಲಾಟೆ ಆಗಿರುವುದಿಲ್ಲ, ಆರೋಪಿತರು ನಮ್ಮನ್ನು ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿರುವುದಿಲ್ಲ, ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ನಾವು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ಆರೋಪಿತರ ವಿರುದ್ಧ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ನೀಡಿರುವುದಿಲ್ಲ.

4. ನನಗೆ ಈಗ ತೋರಿಸಿದ ಗೊದಮಟ್ಟೆ ಯಾವುದೆಂದು ನನಗೆ ಗೊತ್ತಿಲ್ಲ ನನಗೆ ಈಗ ತೋರಿಸಿದ ಶರ್ಟು, ಪ್ಯಾಂಟು ಮತ್ತು ಬನಿಯನ್ ಯಾರದೆಂದು ನನಗೆ ಗೊತ್ತಿಲ್ಲ. ನನಗೆ ಈಗ ತೋರಿಸಿದ ಮಚ್ಚು/ಲಾಂಗನ್ನು ನಾನು ಈ ಹಿಂದೆ ನೋಡಿರುವುದಿಲ್ಲ ಅದನ್ನು ಪೋಲೀಸರಿಗೆ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೂ ಸದರಿ ಆಯುದಕ್ಕೂ ಏನು ಸಂಬಂದ ಎಂದು ನನಗೆ ಗೊತ್ತಿಲ್ಲ. ನನಗೆ ಈಗ ತೋಾರಿಸಿದ ಪೋಟೋದಲ್ಲಿರುವ ಕೆಎ–11–ಇವಿ–4330 ಬೈಕು ಯಾರದು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ</u>**

5. ದಿಃ21.03.2025 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ19.03.2025 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ಬಹಿರ್ದೆಸೆಗೆಂದು ಚಾಸಾ-1 ರವರ ಜೊತೆಗೆ ಹೊರಗೆ ಹೋಗಿದ್ದಾಗ ಆರೋಪಿತರು ದ್ವಿಚಕ್ರ ವಾಹನದಲ್ಲಿ ನಮ್ಮನ್ನು ಹಿಂಬಾಲಿಸಿಕೊಂಡು ಬಂದು ಏಕಾಏಕಿ ಮಾದಿಗ ಸೂಳೆ ಮಗನೆ ಎಂದು ಜಾತಿ ನಿಂದನೆ ಮಾಡಿ ಕೊಲೆ ಮಾಡುವ ಉದ್ದೇಶದಿಂದ 1ನೇ ಆರೋಪಿ ಲಾಂಗನ್ನು ಬೀಸಿದಾಗ ಚಾಸಾ- 1 ರವರು ತಪ್ಪಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಅವರ ಬಲಗೈಗೆ ಲಾಂಗಿನಿಂದ ರಕ್ತಗಾಯ ಆಗಿದ್ದು ಅವರು ಕಿರುಚಾಡಿದಾಗ 1ನೇ ಆರೋಪಿ ಮತ್ತು 2ನೇ ಆರೋಪಿ ಕಿರುಚಿದರೆ ಇಲ್ಲೆ ಸಾಯಿಸುತ್ತೇನೆಂದು ಜಾತಿ ನಿಂದನೆ ಮಾಡಿ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಾನು ಬಿಡಿಸಲು ಹೋದಾಗ ನನಗೂ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ನನ್ನ ಕೆನ್ನೆಗೆ ಹೊಡೆದು ಲಾಂಗಿನಿಂದ ನನ್ನ ಬಲಮುಂಗೈಗೆ ಹೊಡೆದು ರಕ್ತ ಗಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅವರು ದ್ವಿಚಕ್ರವಾಹನದಲ್ಲಿ ಚಾಸಾ- 1 ರವರನ್ನು ಮದ್ಯೆಕ್ಕೆ ಕೂರಿಸಿಕೊಂಡು ಲಾಂಗಿನಿಂದ ತಲೆಗೆ ರಕ್ತ ಬರುವ ಹಾಗೆ ಹೊಡೆದು ಊರಿನ ಬೀದಿಯಲ್ಲಿ ಸುತ್ತಾಡಿಸಿ 3ನೇ ಆರೋಪಿ ಮತ್ತು 4ನೇ ಆರೋಪಿತರಿಗೆ ಪೋನ್ ಮಾಡಿ ಸ್ಮಶಾನದ ಹತ್ತಿರ ಕಾಲುವೆ ಬಳಿ ಕರೆಸಿಕೊಂಡರು ಎಂದರೆ ಸರಿಯಲ್ಲ. ಅವರು ಚಾಸಾ- 1 ರವರನ್ನು ಜಾತಿ ನಿಂದನೆ ಮಾಡಿ ಬೈದು ದೊಣ್ಣೆ

ಮತ್ತು ಕೈಗಳಿಂದ ಹಲ್ಲೆ ಮಾಡಿ ಯಾವುದೇ ದೂರನ್ನು ಕೊಟ್ಟರೆ ಪೆಟ್ರೋಲ್ ಹಾಕಿ ನಮ್ಮನ್ನು ನಮ್ಮ ಕುಟುಂಬವನ್ನು ಸುಟ್ಟು ಹಾಕುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆ ಸಮಯ ಚಾಸಾ- 3 ರವರು ಮೋಬೈಲ್ ಫೋನಿನಿಂದ ಘಟನೆಯನ್ನು ರೆಕಾರ್ಡ್ ಮಾಡುತ್ತಿದ್ದಾಗ 1ನೇ ಆರೋಪಿ ಅದನ್ನು ಕಿತ್ತುಕೊಂಡು ಕೊಲೆ ಬೆದರಿಕೆ ಹಾಕಿ ಲಾಂಗಿನಿಂದ ಎಡತೊಡೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **"**ಮೊನ್ನೆ ದಿನ ..............**...** ..............**...** ..............**...** ..............**...** .............. **...** ..............**...** ಗೊತ್ತಾಯಿತು" ಎಂಬ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.8** ಎಂದು ಗುರುತಿಸಲಾಯಿತು.

**6.** ಆರೋಪಿತರ ಜೊತೆ ನಾನು ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಒಂದೇ ಊರಿನವರು ಒಬ್ಬರಿಗೊಬ್ಬರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆದಕಾರಣ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ**: ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**